# ಪ್ರಿನ್ಸ್ ಹ್ಯಾರಿ ಪ್ರಲಾಪ

ಹಲವು ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಲ್ಲಿ ಹಳೆಯ ಅರಸೊತ್ತಿಗೆಗಳು ಈಗಲೂ ತಮ್ಮ ಮಹತ್ವವನ್ನು ಉಳಿಸಿಕೊಂಡಿವೆ. ಆದರೆ ಈ ಅರಸೊತ್ತಿಗೆಗಳು ಎಷ್ಟು ಮಹತ್ವ ಪಡೆದುಕೊಳ್ಳಬೇಕು ಎನ್ನುವ ಚರ್ಚೆ ನಿರಂತರ ನಡೆಯುತ್ತಲೇ ಇದೆ. ಕೆಲವು ಅರಸೊತ್ತಿಗೆಗಳಲ್ಲಿ 'ಮಹಾರಾಜ'ರು ಚುನಾವಣೆಗೆ ನಿಂತು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರತಿನಿಧಿಗಳಾದದ್ದೂ ಇದೆ. (ಮೈಸೂರಿನ ದಿ.ಶ್ರೀಕಂಠದತ್ತ ಒಡೆಯರ್ ಅವರೂ ಇದಕ್ಕೊಂದು ಉದಾಹರಣೆ.) ಇಂಗ್ಲೆಂಡಿನಲ್ಲಿ ರಾಣಿ ಎರಡನೇ ಎಲಿಜಬೆತ್ ಇವತ್ತಿಗೂ ಸರ್ಕಾರದ ಮಟ್ಟದಲ್ಲಿ ಅತ್ಯಧಿಕ ಪ್ರಭಾವ ಉಳಿಸಿಕೊಂಡಿರುವಾಕೆ. ಬಕಿಂಗ್‌ಹ್ಯಾಮ್ ಅರಮನೆಗೆ ಮತ್ತು ಅಲ್ಲಿರುವ ರಾಣಿ, ಯುವರಾಜರಿಗೆ ಇಂಗ್ಲೆಂಡಿನ ಎಲ್ಲ ಜನಪ್ರತಿನಿಧಿಗಳೂ ಅಪಾರ ಗೌರವ ಕೊಡುತ್ತಾರೆ. ಜನರೂ ಕೂಡಾ. ಅರಮನೆ ಅಲ್ಲಿನ ಪ್ರಜಾಪ್ರಭುತ್ವದ ಒಂದು ಅಂಗವೆಂಬಂತೆಯೇ ಇದೆ. ಆದರೆ ಅರಸೊತ್ತಿಗೆಗೆ ಪ್ರಾಮುಖ್ಯತೆ ಕೊಡುವುದನ್ನು ವಿರೋಧಿಸುವ ಸಾಕಷ್ಟು ಜನರೂ ಅಲ್ಲಿದ್ದಾರೆ.

ಕಳೆದ ವಾರ ಇಂಗ್ಲೆಂಡಿನ ಯುವರಾಜ, ವೇಲ್ಸ್ ನ ರಾಜಕುವರ, ಪ್ರಿನ್ಸ್ ಹ್ಯಾರಿ (ಪೂರ್ಣ ಹೆಸರು ಹೆನ್ರಿ ಚಾರ್ಲ್ಸ್ ಆಲ್ಬರ್ಟ್ ಡೇವಿಡ್) ನೀಡಿದ ಹೇಳಿಕೆಯೊಂದು ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿದೆ. 'ವಿಂಡ್ಸರ್ ಅರಮನೆಯಲ್ಲಿ ಯಾರಿಗೂ ಸಿಂಹಾಸನ ಬೇಡವಾಗಿದೆ. ಬ್ರಿಟಿಷ್ ಅರಸೊತ್ತಿಗೆ ಆಧುನೀಕರಣದ ಹಾದಿಯಲ್ಲಿದೆ' ಎನ್ನುವುದು ಹೇಳಿಕೆಯ ಮುಖ್ಯ ಸಾರ. ಈಗ ಅಧಿಕೃತವಾಗಿ ಪಟ್ಟದಲ್ಲಿರುವ ಎಲಿಜಬೆತ್ ರಾಣಿಗೆ 91 ವರ್ಷ ವಯಸ್ಸಾಗಿದೆ. 1952ರಿಂದ ಸಿಂಹಾಸನದಲ್ಲಿ ಕುಳಿತಿರುವ ಆಕೆಗೆ ಹೆಚ್ಚು ಓಡಾಡಲು ಆಗುವುದಿಲ್ಲ. ಆಕೆಯ ಉತ್ತರಾಧಿಕಾರಿಯಾಗಿ ಯಾರನ್ನಾದರೂ ನೇಮಿಸಬೇಕಿದೆ. ಮುಂದಿನ ಇಂಗ್ಲೆಂಡ್ ದೊರೆ ಯಾರು.. ಎನ್ನುವುದೀಗ ಪ್ರಶ್ನೆ.

ಹ್ಯಾರಿ ಪ್ರಿನ್ಸ್ ಚಾರ್ಲ್ಸ್‌ನ ಕಿರಿಯ ಮಗ. ಅರ್ಥಾತ್ ರಾಜಕುಮಾರಿ ಡಯಾನಾಳ ಮಗ. ಡಯಾನಾ ಗಂಡನನ್ನು ತ್ಯಜಿಸಿ, ಅರಬ್ ಶ್ರೀಮಂತನೊಬ್ಬನ ಜತೆಗೆ ಸ್ನೇಹ ಇಟ್ಟುಕೊಂಡದ್ದು, ಬಳಿಕ ಆಕೆಯ ಕಾರು ಪ್ಯಾರಿಸ್‌ನಲ್ಲಿ ಅಪಘಾತಕ್ಕೆ ಒಳಗಾಗಿ ಆಕೆ ತೀರಿಕೊಂಡದ್ದು ಎಲ್ಲವೂ ಹಳೆಯ ಕಥೆ. ತಾಯಿ ಡಯಾನಾ ಅಪಘಾತದಲ್ಲಿ ಸತ್ತಾಗ ಹ್ಯಾರಿಗೆ ಕೇವಲ 12 ವರ್ಷ. ಈಗ 32. ತಾಯಿಯ ಮರಣದ ಆಘಾತವನ್ನು ಹಲವು ವರ್ಷಗಳ ಕಾಲ ಹಲ್ಲು ಕಚ್ಚಿ ಸಹಿಸಿಕೊಂಡಿದ್ದ ಪ್ರಿನ್ಸ್ ಹ್ಯಾರಿ, ಮೂರು ವರ್ಷಗಳ ಕೆಳಗೆ ಅತೀವ ಮಾನಸಿಕ ಒತ್ತಡದ ಚಿಕಿತ್ಸೆಗಾಗಿ ಪುನರ್ವಸತಿ ಕೇಂದ್ರಕ್ಕೆ ಸೇರಿಕೊಂಡಿದ್ದ. ಈಗ ಮಾನಸಿಕ ಕ್ಲೇಶದಿಂದ ಹೊರಬಂದು ಆರೋಗ್ಯವಾಗಿರುವ ಹ್ಯಾರಿ, 'ಉತ್ತರಾಧಿಕಾರಿಯಾಗಲು ಯಾರಿಗೂ ಮನಸ್ಸಿಲ್ಲ' ಎಂದಿದ್ದಾನೆ.

ಈಗಿನ ಲೆಕ್ಕಾಚಾರ ಪ್ರಕಾರ, ರಾಣಿ ಎಲಿಜಬೆತ್ ಉತ್ತರಾಧಿಕಾರಿಯಾಗಿ ಹ್ಯಾರಿಯ ಅಣ್ಣ (ಪ್ರಿನ್ಸ್ ಚಾರ್ಲ್ಸ್‌ನ ದೊಡ್ಡ ಮಗ) ಪ್ರಿನ್ಸ್ ವಿಲಿಯಂ ಪಟ್ಟಕ್ಕೆ ಏರುತ್ತಾನೆ. ಆತ ಇದುವರೆಗೆ ಇಂತಹ 'ಬೀಸುಹೇಳಿಕೆ' ನೀಡಿಲ್ಲ. ಆತನ ಬದಲಾಗಿ ಪ್ರಿನ್ಸ್ ಹ್ಯಾರಿ ನೀಡಿದ್ದಾನೆಯೆ? ಅಮೆರಿಕದ 'ನ್ಯೂಸ್‌ವೀಕ್'ಗೆ ನೀಡಿದ ಸಂದರ್ಶನದಲ್ಲಿ ಹ್ಯಾರಿ, 'ಎಷ್ಟೋ ಸಲ, ನಾನು ಗಾಜಿನ ಪಾತ್ರೆಯಲ್ಲಿರುವ ಗೋಲ್ಡ್‌ಫಿಶ್‌ನಂತೆ ಇದ್ದೇನೆ ಅನ್ನಿಸುತ್ತದೆ. ನನಗೂ ಜನಸಾಮಾನ್ಯರಂತೆ ಬದುಕುವ ಆಸೆ. ಯಾವ ಗದ್ದಲಗಳೂ ಇಲ್ಲದೆ ಮಾಧ್ಯಮಗಳ ಪ್ರಚಾರವಿಲ್ಲದೆ ಸಾಮಾನ್ಯರಂತೆ ಬೀದಿಯಲ್ಲಿ ಶಾಪಿಂಗ್ ಮಾಡಿಕೊಂಡು ಅಡ್ಡಾಡುವ ಆಸೆ..' ಎಂದೆಲ್ಲ ಮಾತನಾಡಿದ್ದಾನೆ. ಸಾಮಾನ್ಯವಾಗಿ ರಾಜಕುವರರು ಐಶಾರಾಮಿ ಪಾರ್ಟಿಗಳಲ್ಲಿ ಮುಳುಗಿ, ಜನರಿಂದ ದೂರವೇ ಆಗಿ ಬದುಕುವವರು. ಅವರ ಖರ್ಚು ವೆಚ್ಚಗಳನ್ನೆಲ್ಲ ಸರ್ಕಾರವೇ ನೋಡಿಕೊಳ್ಳುತ್ತಿದೆ. ಹೆಸರಿಗೆ ಒಂದಿಷ್ಟು ಸಮಾಜಸೇವೆ ಮಾಡುವವರು. ಸ್ವಂತ ಉದ್ಯೋಗ ಎನ್ನುವುದು ಇರುವುದಿಲ್ಲ. ಹ್ಯಾರಿಯೂ ಇದಕ್ಕೆ ಹೊರತಲ್ಲ. ಹಿಂದೊಮ್ಮೆ ಈಗ 'ಈಜುಕೊಳದ ಪಾರ್ಟಿ'ಯಲ್ಲಿ ಬೆತ್ತಲೆ ನಿಂತದ್ದು ದೊಡ್ಡ ಸುದ್ದಿಯಾಗಿತ್ತು.

ಹ್ಯಾರಿಯ ಹೇಳಿಕೆಯ ಬಗ್ಗೆ ವಿಭಿನ್ನ ಅಭಿಪ್ರಾಯಗಳು ಪ್ರಕಟವಾಗಿವೆ. ಕೆಲವರು 'ಸರ್ಕಾರದ ಖರ್ಚಲ್ಲಿ ಬದುಕುವವರು ಘನತೆಯಿಂದ ಮಾತನಾಡಬೇಕು, ಸಭ್ಯರಂತೆ ವರ್ತಿಸಬೇಕು' ಎಂದೆಲ್ಲ ಜಾಡಿಸಿದ್ದಾರೆ. 'ಮೊದಲು ನೆಟ್ಟಗೆ ಯಾವುದಾದರೂ ಕೆಲಸಕ್ಕೆ ಸೇರಿಕೊಳ್ಳಯ್ಯಾ' ಎಂದೊಬ್ಬರು ಸೂಚಿಸಿದ್ದಾರೆ. ಇನ್ನು ಕೆಲವರು 'ರಾಜಕುವರ ಮುಕ್ತ ಮನಸ್ಸಿನಿಂದ ಮಾತನಾಡಿದ್ದಾನೆ. ಸತ್ಯವನ್ನೇ ಹೇಳಿದ್ದಾನೆ' ಎಂದೆಲ್ಲ ಹೊಗಳಿದ್ದಾರೆ. ಇಂಗ್ಲೆಂಡಿನ ಅರಸೊತ್ತಿಗೆಯ ಆದಾಯ ಸರ್ಕಾರದಿಂದ ಬರುವುದೇನೋ ನಿಜ. ಆದರೆ ಮಹಾರಾಣಿಯ ಹೆಸರಲ್ಲಿ ಸಾಕಷ್ಟು ಅರಮನೆಗಳು, ಶಾಪಿಂಗ್ ಮಾಲ್‌ಗಳು, ಹೋಟೆಲ್‌ಗಳು, ಸಾವಿರಾರು ಎಕರೆ ಜಮೀನು ಎಲ್ಲವೂ ಇದೆ. ಇದೆಲ್ಲದರ ಒಡೆತನ ರಾಣಿಯದ್ದೇ ಆದರೂ, ಆಕೆ ಅದನ್ನು ಮಾರುವಂತಿಲ್ಲ. ಅದರ ಆದಾಯವೆಲ್ಲ ಸರ್ಕಾರಕ್ಕೆ ಹೋಗುತ್ತದೆ. ಇದನ್ನು ನೋಡಿಕೊಳ್ಳಲೆಂದೇ ಕ್ರೌನ್ ಎಸ್ಟೇಟ್ ಎನ್ನುವ ಖಾಸಗಿ ಸಂಸ್ಥೆ ಇದೆ. ಒಂದು ಮೂಲದ ಪ್ರಕಾರ, ಕಳೆದ ಹತ್ತು ವರ್ಷಗಳಲ್ಲಿ ಒಟ್ಟು 2.4 ಶತಕೋಟಿ ಪೌಂಡ್ ಆದಾಯ ಈ ಆಸ್ತಿಗಳಿಂದ ಸರ್ಕಾರಕ್ಕೆ ಬಂದಿದೆ. ಈ ಆದಾಯದಲ್ಲಿ ಪ್ರತಿ ವರ್ಷ ಶೇಕಡಾ 25ರಷ್ಟು ಪಾಲು ರಾಣಿಗೆ ಹೋಗುತ್ತದೆ. ಆ ಆದಾಯದಲ್ಲಿ ಆಕೆ ಅರಮನೆಯ ಸಿಬ್ಬಂದಿ, ತನ್ನ ಓಡಾಟ, ಕುಟುಂಬದ ಸದಸ್ಯರ ಖರ್ಚುವೆಚ್ಚಗಳನ್ನು ನೋಡಿಕೊಳ್ಳಬೇಕು. ಅರಮನೆಯ ರಿಪೇರಿಗೆ ಸರ್ಕಾರ ಪ್ರತ್ಯೇಕವಾಗಿ 370 ದಶಲಕ್ಷ ಪೌಂಡ್ ನಿಗದಿ ಮಾಡಿದ್ದು ಕಳೆದ ವರ್ಷ ದೊಡ್ಡ ಸುದ್ದಿಯಾಗಿತ್ತು.

ಪ್ರಿನ್ಸ್ ಹ್ಯಾರಿ ರಾಣಿಯ ಉತ್ತರಾಧಿಕಾರಿ ಆಗುವುದು ದೂರದ ಮಾತು. ಆದರೆ ಆತ ಎಷ್ಟೋ ಸಲ ಹೀಗೆ ಬಿಡುಬೀಸಾಗಿ ಹೇಳಿಕೆ ಕೊಟ್ಟು ಸಾರ್ವಜನಿಕ ಚರ್ಚೆ ಹುಟ್ಟು ಹಾಕುವುದು ನಡೆದೇ ಇದೆ. ಬರುವ ನವೆಂಬರ್‌ನಲ್ಲಿ ಈತನಿಗೆ ಮದುವೆ ಎಂಬ ಸುದ್ದಿಯೂ ಇದೆ. ಅಮೆರಿಕದ ನಟಿ ಮೇಘನ್ ಮಾರ್ಕಲ್ ಜತೆಗೆ ಈತ ಬಹಿರಂಗವಾಗಿ ಓಡಾಡುವುದು ಎಲ್ಲರಿಗೆ ಗೊತ್ತು. ಅರಮನೆಯೂ ಈತನ ಪ್ರೇಮಕ್ಕೆ ಗ್ರೀನ್‌ಸಿಗ್ನಲ್ ಕೊಟ್ಟಿದೆಯಂತೆ. ಆಕೆ ಈತನಿಗಿಂತ ಮೂರು ವರ್ಷ ದೊಡ್ಡವಳು. ಅರಮನೆಯಲ್ಲಿ ಇತ್ತೀಚೆಗೆ ನಡೆದ ಯುವರಾಣಿ ಕೇಟ್ ಮಿಡ್ಲ್‌ಟನ್ ತಂಗಿಯ ನಿಶ್ಚಿತಾರ್ಥಕ್ಕೆ ಮೇಘನ್‌ಗಳನ್ನು ಈತ ಕರೆದುಕೊಂಡು ಬಂದಿದ್ದ. ಅರಮನೆಯ ನಿಯಮಗಳನ್ನು ಮೀರಿ ಆಕೆಗೆ ಪ್ರವೇಶ ಮತ್ತು ಪ್ರತ್ಯೇಕ ಆಳುಗಳ ಸೇವೆಯ ಗೌರವ ನೀಡಲಾಗಿತ್ತು. ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65